# ಹೆಳವರು ಬಂದರು!

■ ಪ್ರಕಾಶ ಎಸ್. ಮನ್ನಂಗಿ

ಚುಮು ಚುಮು ನಸುಕಲಿ ಬಂದರು
ಹೆಳವರು ದಡ ಬಡ ನಮ್ಮೂರಿಗೆ
ಚಕ್ಕಡಿ ಸದ್ದಿಗೆ ಚಿಣ್ಣರು ಬಂದರು
ಕುಣಿಯುತ ಮನೆ ಹೊರಗೆ

ಚಕ್ಕಡಿಯಿಂದ ಮುದುಕರು, ಮಕ್ಕಳು
ಇಣುಕುತಲಿದ್ದರು ತಲೆ ಹೊರಗೆ
ಕುದುರೆಯ ಮೇಲೆ ಸರಕು ಸಾಮಗ್ರಿ
ಹೆಂಗಸರ ಕೈಯಲಿ ಚಾಟಿಯು ಜೊತೆ ಜೊತೆಗೆ

ಚಕ್ಕಡಿ ಪಟ ಪಟ, ಕುದುರೆಯ ಟಕ ಟಕ
ಆಕಳು, ಕೋಳಿ ಬಂದಿತು ಮೆರವಣಿಗೆ
ಮಧ್ಯಾಹ್ನದ ಬಿಸಿಲಿಗೆ ಗುಡಾರ ಹಾಕಿ
ತಯಾರಾಯಿತು ಬಿಸಿ ಬಿಸಿ ಅಡುಗೆ!

ಮರುದಿನದಿಂದ ಬೆಳಗಾಗೆದ್ದು ಹೊತ್ತಿಗೆ
ಹೊತ್ತು ಹೆಳವರು ಬಂದರು ಮನೆ ಮನೆಗೆ

ವಂಶವೃಕ್ಷದ ಹಿರಿಮೆಯ ದಾಖಲೆ ಸಹಿತ
ರಾಗವಾಗಿ ಹೇಳಿದರೆಲ್ಲ ಹಿರಿಯರಿಗೆ

ಗೌಡರು ಕೊಟ್ಟ ಆಕಳು ಕರುಗಳು
ಶೆಟ್ಟರು ಕೊಟ್ಟಿಹ ದಿನಸಿಗಳೆಲ್ಲ ಜೋಳಿಗೆಗೆ
ಯಜಮಾನಿಯ ಸೀರೆ, ಮಕ್ಕಳು ಬಿಟ್ಟ
ಹಳೆ ಅರಿವೆ ತುಂಬಿಕೊಂಡರು ಕುಂಚಿಗೆಗೆ

ರೈತರು ಕೊಟ್ಟ ಮೇವಿನ ಪೆಂಡೆಯು
ಸರ ಸರ ಏರಿತು ಹುಡುಗರ ಹೆಗಲಿಗೆ
ಮನೆ ಮನೆ ತಿರುಗಿ ಹಿರಿಯರ ಕುಶಲವ
ಕೇಳಿ ಹರಸಿದರೆಲ್ಲ ಸಮೃದ್ಧಿಗೆ

ನಿಮ್ಮಯ ಮನೆಯ ಮಗನೆಂದರುಹಿ
ದಾನವ ಪಡೆದು ಹರಸಿದರೆಲ್ಲರಿಗೆ
ವಾರವು ಕಳೆಯಲು ಊರಿಗೆ ವಿದಾಯ
ಹೇಳುತ ಹೊರಟರು ಮತ್ತೊಂದೂರಿಗೆ! ■



ಚಿತ್ರ: ಮಂಜುನಾಥ ಹುಲಕೊಪ್ಪದ

# ನೆರೆಯ ಹಾಡು ಪಾಡು

■ ಲಲಿತಾ ಕೆ. ಹೊಸಪ್ಯಾಟಿ

ಮುಗಿಲು ಹರಿದು ಮೋಡ ಒಡೆದು
ನೆರೆಯು ಬಂದಿದೆ
ಹಳ್ಳ ಕೊಳ್ಳ ಕೆರೆ ಕಟ್ಟೆ
ಛಿದ್ರಗೊಂಡಿದೆ

ಪೈರು ಹೊತ್ತ ಹೊಲ ತೋಟ
ಮುಳುಗಿ ಹೋಗಿದೆ
ಮನೆಯ ಮೆಟ್ಟಿಲೇರಿ ಬಂದು
ಮನೆಯ ಹೊಕ್ಕಿದೆ

ಕೋಣಿ ಓಣಿ ಒಂದು ಬಿಡದೇ
ತುಂಬಿ ನಿಂತಿದೆ
ಅಟ್ಟ ಏರಿ ಹೊಂಟ ನಿಂತ
ನಮ್ಮ ಬೆನ್ನು ಹತ್ತಿದೆ

ರಸ್ತೆ ಎಲ್ಲಿ ಕಾಣದಲ್ಲ
ಹುಚ್ಚೆ ಹಿಡಿದಿದೆ
ಕಟ್ಟಿ ಹಾಕಿದ ದನಕರುಗಳ
ಕೊಚ್ಚಿ ಒಯ್ದಿದೆ



ಚಿತ್ರ: ಮಂಜುನಾಥ ಹುಲಕೊಪ್ಪದ

ಸೇತುವೆಯ ರಸ್ತೆ ಮೇಲೂ
ನೆರೆಯು ನುಗ್ಗಿದೆ
ಕಾರು ಬಸ್ಸು ಟ್ರೇನು ವ್ಯಾನು
ತೇಲಿ ಹೋಗಿವೆ

ಮರಗಿಡಗಳ ಬೇರು ಕಳಚಿ
ಕೆಳಗೆ ಉರುಳಿವೆ
ಗಂಟು ಮೂಟೆ ಕಟ್ಟಿಕೊಂಡು
ಜನರ ದಂಡು ಹೊರಟಿದೆ

ಕಾಳು ಕಡಿ ಹಿಟ್ಟು ರೊಟ್ಟಿ
ಒದ್ದೆಯಾಗಿದೆ
ಒಲೆಯ ಹಚ್ಚಲು ನೆಲವೇ ಇಲ್ಲ
ನೀರೆ ತುಂಬಿದೆ

ದೇವರೆಲ್ಲಿ ಕಳಸವೆಲ್ಲಿ
ಗುಡಿಯೇ ಮುಳುಗಿದೆ
ಶಾಲೆಯಲ್ಲಿ ಗಂಜಿ ಕೇಂದ್ರ
ಜನರ ಕರೆದಿದೆ

ಕಡಲಿನಂತ ನೆರೆಯು ಬಂದು
ಒಡಲ ಹೊಕ್ಕಿದೆ
ಊರೆ ಮುಳುಗಿ ಹೋಯಿತಲ್ಲ
ನಾಳೆ ಎಲ್ಲಿಗೆ

ನೀರ ಮೇಲೆ ನಡೆದು ಬಂದು
ಯಾರು ನಮ್ಮ ಹೊರುವರು
ಮುಳುಗಡೆಯ ಮೊರೆಯ ಕೇಳಿದ
ಪೊರೆವ ಅವರೆ ಬಂಧುವು ■